ರವಾನೆ ಸಂಖ್ಯೆಃ ಆಡಳಿತ/ /2018

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ.
ಚಾಮರಾಜನಗರ, ದಿನಾಂಕಃ 16.01.2018.

ಮೆಮೋ

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ **LCA-I/47/2017**, ದಿಃ **10.01.2018** ರ ಜೆರಾಕ್ಸ್ ಪ್ರತಿಯೊಡನೆ ರಾಜ್ಯವಾರು ಶಿರಸ್ತೇದಾರರ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಹಾಗೂ ಈ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ದಿಃ **29.11.2017** ರಂದು ತಯಾರಿಸಲಾದ ಶಿರಸ್ತೇದಾರರ ಜೇಷ್ಠತಾ ಪಟ್ಟಿಯನ್ನು ಈ ಪತ್ರದೊಡನೆ ಲಗತ್ತಿಸಿ ಮಿಂಚಂಚೆ ಮಾಡುತ್ತಿದ್ದು, ಸದರಿ ಎರಡು ಪರಿಷ್ಕೃತ ಜೇಷ್ಠತಾ ಪಟ್ಟಿಗಳನ್ನು ನಿಮ್ಮ ನ್ಯಾಯಾಲಯದ ಶಿರಸ್ತೇದಾರರುಗಳಿಗೆ ಹಂಚಿಕೆ ಮಾಡಿ, ಸದರಿ ಪಟ್ಟಿಯಲ್ಲಿನ ವಿವರಗಳ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ ಅಥವಾ ಲೋಪ ಕಂಡುಬಂದಲ್ಲಿ, ಈ ಕಛೇರಿಗೆ ದಿಃ **18.01.2018** ರ ಒಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಹಾಗೂ ಈ ಮೆಮೋವನ್ನು ನಿಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಅಂಟಿಸುವಂತೆ ಈ ಮೂಲಕ ನಿಮಗೆ ಸೂಚಿಸಲಾಗಿದೆ. ಒಂದು ಪಕ್ಷದಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ ಸಹ ಲಿಖಿತ ರೂಪದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಲು ಈ ಮೂಲಕ ನಿರ್ದೇಶಿಸಲ್ಪಟ್ಟಿದ್ದೇನೆ.

ಆದೇಶದ ಮೇರಿಗೆ,

ಮುಖ್ಯ ಆಡಳಿತಾಧಿಕಾರಿಗಳು,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ.

ಗೆ,

1. ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)
2. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮು.ನ್ಯಾ.ದಂ., ಚಾಮರಾಜನಗರ
3. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕೊಳ್ಳೇಗಾಲ
4. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗುಂಡ್ಲುಪೇಟೆ
5. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಚಾಮರಾಜನಗರ
6. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕೊಳ್ಳೇಗಾಲ
7. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗುಂಡ್ಲುಪೇಟೆ
8. ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಯಳಂದೂರು.
9. ಜಿಲ್ಲಾ ನ್ಯಾಯಾಲಯದ ಶಿರಸ್ತೇದಾರರುಗಳಿಗೆ.
10. ಸೂಚನಾ ಫಲಕ, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ